ಗೊದ್ದ ಎಂಬ ದೂರದ ಊರಿನಿಂದ ಸೈಕಲ್ ತುಳಿದು ಮನೆ ತಲುಪವಷ್ಟರಲ್ಲಿ ಹಸಿದ ಹೊಟ್ಟೆಯಲ್ಲಿ ತಾಳ್ಮೆಗೆಟ್ಟು ಮಣ್ಣು ತಿಂದು ನಿದ್ರೆ ಹೋಗುವ. ಅಲಸಂದೆ ಬಳ್ಳಿಯಾಕಾರದ ಕೊರಳಿನ, ಡೊಳ್ಳು ಹೊಟ್ಟೆಯ ಮಗಳು ಅಸ್ಸೆನಾರ್‌ಗೆ ಇಲ್ಲವಲ್ಲ.

ನಾವು ನಮ್ಮ ಬಡತನದ ಬೇಗೆಯನ್ನು ಮತ್ತೊಬ್ಬರಿಗೆ ಹೇಳುವಾಗ, ಕೇಳಿಸಿಕೊಳ್ಳುವ ವ್ಯಕ್ತಿ ಅಲ್ಪಸ್ವಲ್ಪವಾದರೂ ಬಡತನವನ್ನು ಅನುಭವಿಸಿರಬೇಕು. ಅನುಭವ ಇಲ್ಲದವರ ಮುಂದೆ ನಮ್ಮ ಬವಣೆಗಳನ್ನು ಹಲುಬಿದರೆ ನಾವೇ ತಪ್ಪಿತಸ್ಥರಾಗಿ ತಮಾಷೆಯ ವಸ್ತುವಾಗಿ ಬಿಡುತ್ತೇವೆ.

ಇವೆಲ್ಲವನ್ನು ಗೋಪಾಲ್ ಯಾದವ್ ಎಂದೋ ಅರ್ಥ ಮಾಡಿಕೊಂಡಿದ್ದ. ಊರಿನಲ್ಲಿ ಪೊಲೀಸಿನವರು ತಮ್ಮ ಪಾಲನ್ನು ವಸೂಲಿ ಮಾಡುವಾಗ ಅವನು ಎಷ್ಟೋ ಸಲ ಅವರ ಪಾದಗಳಿಗೆ ಬಿದ್ದು ಕೇಳಿಕೊಂಡಿದ್ದುಂಟು. ಆದರೆ ಅವರು ಮಾತ್ರ ತನ್ನನ್ನು ಒಂದು ಹುಳುವಿನಂತೆ ಕೊಡವಿ ಬೀಳಿಸುತ್ತಿದ್ದರೇ ವಿನಹ ಒಮ್ಮೆಯೂ ರಿಯಾಯಿತಿ ತೋರುತ್ತಿರಲಿಲ್ಲ.

ಅಷ್ಟರಲ್ಲಿ ಕಾರು ಕಲಂದರ್ ಹಾಜಿಯವರ ಮನೆಯ ಮುಂದೆ ಬಂದು ನಿಂತುಕೊಂಡಿತು. ಬಾಸುಮತಿ ಅಕ್ಕಿಯ ಸುಗಂಧ ಅಲ್ಲೆಲ್ಲಾ ಪಸರಿಸಿತ್ತು. ಲಾಲ್‌ಮಾತ್ತಿಯಾದಲ್ಲಿ, ಶುಕ್ಕೂರ್ ಮಿಯಾನ ಅಂಗಡಿಯಲ್ಲಿ ಗೋಪಾಲ್‌ಗೆ ಮಾತಂಗಿ ಮೊದಲ ಸರ್ತಿ ಈ ಅಕ್ಕಿಯನ್ನು ತೋರಿಸಿದ್ದಳು. ಅಂದು ಅವಳು ಆರು ತಿಂಗಳ ಬಸಿರಿ. ಚೀಲದಿಂದ ಒಂದು ಮುಷ್ಟಿ ಅಕ್ಕಿಯನ್ನೆತ್ತಿ ಮೂಗಿನ ಬಳಿ ಕೊಂಡೊಯ್ದು ಅದರ ವಾಸನೆಯನ್ನು ಹೀರಿ ಆನಂದಿಸಿದ್ದಳು. ಅವಳಿಗೆ ಗೊತ್ತಿತ್ತು, ತಮ್ಮಂತಹ ಬಡಬಗ್ಗರಿಗೆ ಬಾಸುಮತಿ ಅಕ್ಕಿ ಹಣ ಕೊಟ್ಟು ಕೊಂಡು ಉಣ್ಣಲು ಸಾಧ್ಯವಿಲ್ಲವೆಂದು. ಅವೆಲ್ಲಾ ತಮಗೆ ನಿಲುಕದ ನಕ್ಷತ್ರ. ಆದರೂ ಹೆಂಡತಿಯನ್ನು ನೋಯಿಸದೆ, 50 ಗ್ರಾಂ ಅಕ್ಕಿಯನ್ನು ಶುಕ್ಕೂರ್ ಮಿಯಾನಿಂದ ಕೊಂಡಿದ್ದ. ಮಾತಂಗಿ ಅದನ್ನು ಬಾಯಿಗೆ ಹಾಕಿ ಜಗಿಯುತ್ತಲೇ ಇದ್ದಳು. ಅಕ್ಕಿಯ ರಸ ಅವಳ ಬಾಯಿಯಿಂದ ಜಿನುಗಿದಾಗ ಅದನ್ನು ಒರೆಸಲು ಗೋಪಾಲ್ ಒಪ್ಪದೆ ಅವಳ ಕಣ್ಣುಗಳನ್ನೇ ನೋಡುತ್ತಾ ನಿಂತಿದ್ದ... ಒಂದು ಕರುವನ್ನು ಹಸು ನೋಡುವಂತೆ.

ಅಷ್ಟರಲ್ಲಿ ಯಾರೋ ಬಂದು ಗೋಪಾಲನನ್ನು ತಟ್ಟಿದರು. ಹಿಂತಿರುಗಿ ನೋಡಿದಾಗ ಒಬ್ಬ ಹುಡುಗ ನಿಂತಿದ್ದ. ಅವನಿಗೆ 20ರ ಹರೆಯವಿರಬಹುದು. ಅವನು ಗೋಪಾಲ್ ಯಾದವನ ಬಳಿ ಬಂದು ನಿಂತಾಗ ಅತ್ತರಿನ ಬಾಟಲಿ ಕೆಳಗೆ ಬಿದ್ದು ಒಡೆದಂತೆ ತೋರಿತು.

'ಅರೆ ಭಾಯಿ, ತುಂ ಮೇರಾ ಸಾಥ್ ಆವೋ...'

ಕೈಯಲ್ಲಿದ್ದ ಹಾರೆ, ಪಿಕಾಸಿ, ಗುದ್ದಲಿಗಳನ್ನೆಲ್ಲಾ ಗೋಪಾಲನಿಗೆ ವಹಿಸಿ, ಅಲ್ಲೇ ನಿಂತಿದ್ದ ಕಾರಿನ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುತ್ತ ತಲೆಗೂದಲನ್ನು ಒಪ್ಪ ಓರಣಗೊಳಿಸಿ ತೃಪ್ತನಾಗಿ ನಕ್ಕ. ಅವನು ಹಾಜಿಯವರ ಮೂರನೆಯ ಹೆಂಡತಿ ಫಾತಿಮಾಳ ಮಗನಾದ ತೌಹಾನ ಮಗ ಸಿನಾನ್. ಅವನು ಮುಂದೆ ನಡೆದ. ಗೋಪಾಲ್ ಯಾದವ್ ಅವನನ್ನು ಹಿಂಬಾಲಿಸಿದ. ಸುತ್ತಮುತ್ತಲಿನ ಜಾಗವನ್ನೆಲ್ಲಾ ಕೆತ್ತಿ ಕಡಿದು ಸ್ವಚ್ಛಗೊಳಿಸಲಾಗಿತ್ತು. ಅತಿಥಿಗಳ ಕಾರುಗಳ ನಿಲ್ಲುವ ಜಾಗ!

ತುಂಬಾ ಹೊತ್ತು ನಡೆದಾಗ–

ತೆಂಗಿನ ತೋಪಿನ ಹಸಿರು ಹುಲ್ಲು ಬೆಳೆದಿರುವ ಒಂದೆಡೆ ಹುಡುಗ ನಿಂತ.

'ಭಾಯೀ, ಇಲ್ಲಿ ಗುಂಡಿ ತೋಡಬೇಕು.'

ತನ್ನನ್ನು ಕರೆದುಕೊಂಡು ಬಂದಿದ್ದು ದೊಡ್ಡದೊಂದು ಗುಳಿ ತೋಡಲೆಂದು ಆಗಲೇ